# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 898 |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಅ.ನಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಲಬುರಗಿ ಜಿಲ್ಲೆಯ ಪ್ರಮುಖ ರಾಜ್ಯ ಹೆದ್ದಾರಿಗಳು ಹಾಗೂ ಗ್ರಾಮೀಣ ರಸ್ತೆಗಳ ಗುಂಡಿ ಮುಚ್ಚುವ (Pothole Filling) ಕಾಮಗಾರಿಯ ಪ್ರಸ್ತುತ ಸ್ಥಿತಿಗತಿ ಏನು; | ಕಲಬುರಗಿ ಜಿಲ್ಲೆಯ ಪ್ರಮುಖ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಗುಂಡಿ ಮುಚ್ಚುವ (Pothol Filling) ಕಾಮಗಾರಿಯ ಪ್ರಸ್ತುತ ಸ್ಥಿತಿಗತಿಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. ಗ್ರಾಮೀಣ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯವು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವುದಿಲ್ಲ. |
| ಆ) | 2025-26ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ವತಿಯಿಂದ ಜಿಲ್ಲೆಯ ರಸ್ತೆ ಅಭಿವೃದ್ಧಿಗೆ ಮಿಸಲಿಟ್ಟ ಒಟ್ಟು ಅನುದಾನ ಎಷ್ಟು; | 2025-26ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ವತಿಯಿಂದ ಜಿಲ್ಲೆಯ ರಸ್ತೆ ಅಭಿವೃದ್ಧಿಗೆ ಮಿಸಲಿಟ್ಟ ಒಟ್ಟು ಅನುದಾನದ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ. |
| ಇ) | ಮಳೆಗಾಲದಲ್ಲಿ ಹಾನಿಗೊಳಗಾದ ಬೆಣ್ಣೆತೋರಾ ಮತ್ತು ಕಾಗಿಣಾ ನದಿ ಪಾತ್ರದ ಸೇತುವೆಗಳ ಶಾಶ್ವತ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆಯೇ; | ➢ ರಾಷ್ಟ್ರೀಯ ಹೆದ್ದಾರಿ-150ರ ಮೇಲೆ ಕಾಗಿಣಾ ನದಿಗೆ ಅಡ್ಡಲಾಗಿ ಬೃಹತ್ ಸೇತುವೆಯನ್ನು ಹೊಸದಾಗಿ ನಿರ್ಮಾಣ ಮಾಡಿದ್ದು, ದಿನಾಂಕ: 28.06.2034 ರವರೆಗೆ ಗುತ್ತಿಗೆ ನಿರ್ವಹಣೆ ಅವಧಿಯಲ್ಲಿದೆ, ಸಧ್ಯ ಸೇತುವೆಯು ಸುಸ್ಥಿತಿಯಲ್ಲಿದ್ದು, ಶಾಶ್ವತ ಪರಿಹಾರ ಕೈಗೊಂಡಿದೆ.<br>➢ ಬೆಣ್ಣೆತೋರಾ ನದಿ ಪಾತ್ರದಲ್ಲಿ ಕಣಸೂರ ಹಾಗೂ ಟೆಂಗಳಿ ಗ್ರಾಮಗಳು ಒಳಪಡುತ್ತವೆ. ಕಣಸೂರ ಹಾಗೂ ಟೆಂಗಳಿ ಗ್ರಾಮದ ಹತ್ತಿರ ಇರುವ ಸೇತುವೆಗಳು ಮಳೆಗಾಲದ ಸಮಯದಲ್ಲಿ ಭಾರಿ ಪ್ರಮಾಣದ ಮಳೆ ಬಿದ್ದಾಗ ನೀರಿನ ಒಳ ಹರಿವಿನಿಂದ ಸೇತುವೆಯು ಮುಳುಗಡೆಯಾಗಿ ಸೇತುವೆಗಳ ಕೂಡು ರಸ್ತೆಗಳು ಹಾನಿಗೊಳಗಾಗುತ್ತಿರುತ್ತವೆ. ಇವುಗಳ ದುರಸ್ತಿಗೆ ಅವಶ್ಯಕತೆಗೆ ಅನುಗುಣವಾಗಿ ಅನುದಾನವನ್ನು ಪ್ರಸ್ತಾಪಿಸಲಾಗಿರುತ್ತದೆ. ಸೇತುವೆಗಳು ಸುಸ್ಥಿತಿಯಲ್ಲಿರುವುದರಿಂದ ಶಾಶ್ವತ ದುರಸ್ತಿಯ ಅವಶ್ಯಕತೆ ಇರುವುದಿಲ್ಲ.<br>ಕಾಗಿಣಾ ನದಿ ಪಾತ್ರದಲ್ಲಿ ಮಳಖೇಡ ಹಾಗೂ ದಂಡೋತಿ ಗ್ರಾಮಗಳು ಒಳಪಡುತ್ತಿದ್ದು, ಮಳಖೇಡ ಹತ್ತಿರದ ಸೇತುವೆಯನ್ನು ಪೂರ್ಣಗೊಳಿಸಿ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ದಂಡೋತಿ ಗ್ರಾಮದ ಹತ್ತಿರದ ಸೇತುವೆಯನ್ನು ಮರು ನಿರ್ಮಾಣ ಮಾಡಲು ಗುತ್ತಿಗೆದಾರರನ್ನು ನೇಮಿಸಿದ್ದು ಕಾಮಗಾರಿ ಪ್ರಾರಂಭಿಸಲಾಗುವುದು. |
| ಈ) | ಜಿಲ್ಲೆಯಲ್ಲಿ ನಡೆಯುತ್ತಿರುವ ಮೇಲ್ಸೇತುವೆ (Flyover) ಕಾಮಗಾರಿಗಳನ್ನು ಪೂರ್ಣಗೊಳಿಸಲು | ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ ಬರುವ ಕಲಬುರಗಿ ಜಿಲ್ಲೆಯ ವಾಡಿ ಗ್ರಾಮದ ಹತ್ತಿರ ರಾಷ್ಟ್ರೀಯ ಹೆದ್ದಾರಿ-150 ರಲ್ಲಿ |

| | | |
|---|---|---|
| | ಎಲ್ಲಿಯವರೆಗೆ ಗಡುವನ್ನು ನಿಗದಿಪಡಿಸಲಾಗಿದೆ? | ಕಿ.ಮೀ.40.134 ರಲ್ಲಿ ROB ಕಾಮಗಾರಿಯನ್ನು ದಿನಾಂಕ: 23.09.2027 ರೊಳಗೆ ಪೂರ್ಣಗೊಳಿಸಲು ಗಡುವನ್ನು ನಿಗದಿಪಡಿಸಲಾಗಿದೆ.<br><br>ಕಲಬುರಗಿ ನಗರದ ಸೇಡಂ ರಿಂಗ್ ರಸ್ತೆಯಲ್ಲಿರುವ ಫ್ಲೈ ಓವರ್ ನಿರ್ಮಾಣ ಕಾಮಗಾರಿಯು 2020–21 ನೇ ಸಾಲಿನ ಹಾಗೂ 2021–22 ನೇ ಸಾಲಿನ ಯೋಜನೆಯಡಿಯಲ್ಲಿ ಒಟ್ಟು ರೂ.49.00 ಕೋಟಿಗಳಿಗೆ ಮಂಜೂರಾಗಿರುತ್ತದೆ. ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ ಗುತ್ತಿಗೆ ನಿಗದಿಪಡಿಸಲಾಗಿರುತ್ತದೆ. ಆದರೆ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 202147/2022 ದಾವೆ ಇರುವುರಿಂದ ಈ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. |

ಸಂಖ್ಯೆ: ಲೋಇ 76 ಸಿಐಎಸ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ-1

ಅನುಬಂಧ – 1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ತಿಪ್ಪಣ್ಣ ಕಮಕನೂರು (ವಿಧಾನಸಭೆಯಿಂದ ಚುನಾಯಿತರಾದವರು) ಇವರು ಮಂಡಿಸಿದ ಚುಕ್ಕೆ ಗುರುತಿನ/ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 856 (898) ಕ್ಕೆ ಉತ್ತರಗಳು

ಲೋಕೋಪಯೋಗಿ ಇಲಾಖೆ ವಿಭಾಗ : ಕಲಬುರಗಿ

| ವಿಭಾಗ | ಉಪ–ವಿಭಾಗ | ರಾಜ್ಯ ಹೆದ್ದಾರಿ | | | ಸಾಧಿಸಿದ ಗುರಿ ಪ್ರತಿಶತ (%) | ಜಿಲ್ಲಾ ಮುಖ್ಯ ರಸ್ತೆ | | | ಸಾಧಿಸಿದ ಗುರಿ ಪ್ರತಿಶತ |
|---|---|---|---|---|---|---|---|---|---|
| | | ಒಟ್ಟು ರಸ್ತೆಯ ಉದ್ದ | ಗುಂಡಿ ಮುಚ್ಚಲು ಪ್ರಸ್ತಾಪಿಸಿದ ರಸ್ತೆಯ ಉದ್ದ | ಪ್ರಸ್ತಾಪಿತ ಸಾಧನೆ ಉದ್ದ | | ಒಟ್ಟು ರಸ್ತೆಯ ಉದ್ದ | ಗುಂಡಿ ಮುಚ್ಚಲು ಪ್ರಸ್ತಾಪಿಸಿದ ರಸ್ತೆಯ ಉದ್ದ | ಪ್ರಸ್ತಾಪಿತ ಸಾಧನೆ ಉದ್ದ | |
| ಕಲಬುರಗಿ | ಕಲಬುರಗಿ | 251.41 | 139.87 | 129.15 | 92.34 | 235.84 | 74.09 | 74.09 | 100.00% |
| | ಆಳಂದ | 384.88 | 144.36 | 144.36 | 100.00 | 109.75 | 73.5 | 73.5 | 100.00% |
| | ಅಫಜಲಪೂರ | 195.8 | 71.8 | 71.8 | 100.00 | 151.78 | 75.4 | 75.4 | 100.00% |
| | ಜೇವರ್ಗಿ | 272.71 | 129.29 | 129.29 | 100.00 | 315.12 | 94.82 | 94.82 | 100.00% |
| | ಕಾಳಗಿ | 209.11 | 92.27 | 92.27 | 100.00 | 100.71 | 37.9 | 37.9 | 100.00% |
| ಸೇಡಂ | ಸೇಡಂ | 204.95 | 102.50 | 102.50 | 100.00 | 234.00 | 115.04 | 115.04 | 100.00% |
| | ಚಿತ್ತಾಪೂರ | 200.59 | 123.50 | 123.50 | 100.00 | 170.72 | 79.95 | 79.95 | 100.00% |
| | ಚಿಂಚೋಳಿ | 150.01 | 43.59 | 43.59 | 100.00 | 144.42 | 66.80 | 66.80 | 100.00% |
| | ಒಟ್ಟು | 1869.46 | 847.18 | 836.46 | 98.73 | 1462.34 | 617.5 | 617.5 | 100.00% |

ಅನುಬಂಧ – 2

2025–26 ನೇ ಸಾಲಿನ ಕೆಕೆಆರ್‌ಡಿಬಿ ವತಿಯಿಂದ ಮೀಸಲಿಟ್ಟ ಅನುದಾನ

| ಕಲಬುರಗಿ ಜಿಲ್ಲೆ | | | | |
|---|---|---|---|---|
| ವಿಭಾಗ | ಉಪ–ವಿಭಾಗ | ಕಾಮಗಾರಿಗಳ ಸಂಖ್ಯೆ | ಒದಗಿಸಿದ ಅನುದಾನ (ರೂ. ಲಕ್ಷಗಳಲ್ಲಿ) | ಷರಾ |
| ಕಲಬುರಗಿ | ಕಲಬುರಗಿ | 19 | 4659.7 | |
| | ಅಫಜಲಪೂರ | 4 | 4191.33 | |
| | ಆಳಂದ | 22 | 4643 | |
| | ಜೇವರ್ಗಿ | 13 | 5000 | |
| ಸೇಡಂ | ಸೇಡಂ | 6 | 985 | |
| | ಚಿಂಚೋಳಿ | 1 | 150 | |
| | ಚಿತ್ತಾಪೂರ | – | – | |
| | ಒಟ್ಟು | 65 | 19629.03 | |

2 ①